ತಿಳಿಯುತ್ತಿಲ್ಲ. ಸ್ಥಳೀಯ ಕಾಲೇಜುಗಳ ಸರ್ವತೋಮುಖ ಬೆಳವಣಿಗೆಗೆ ಶಾಸಕರ ಪಾತ್ರವು ಆಗತ್ಯವಾಗಿರುತ್ತದೆ. ಆದ್ದರಿಂದ ಕಾಲೇಜುಗಳ ಸಲಹಾ ಸಮಿತಿಗಳಲ್ಲಿ ಶಾಸಕರನ್ನು ಸೇರಿಸಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸುವುದು ಸೂಕ್ತವಾಗಿದೆ. ಈ ವಿಷಯದಲ್ಲಿ ಮಾನ್ಯ ಶಿಕ್ಷಣ ಮಂತ್ರಿಗಳಕ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವುದಲ್ಲದೆ, ಸರಕಾರದ ಆಜ್ಞೆಯನ್ನು ಈ ಮೂಲಕ ಕಳುಹಿಸುತ್ತಿದ್ದೇನೆ. ಮತ್ತು ಸರ್ಕಾರದ ಕ್ರಮ ಏನೆಂಬ ಬಗ್ಗೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇದು ಹಿಂದೆಯೇ ನಾವು ಆಜ್ಞೆ ಮಾಡಿದ್ದು. ಶಾಸಕರು ಯಾರಿದ್ದಾರೆ, ಅವರುಗಳು ತಮ್ಮ ಕ್ಷೇತ್ರದಲ್ಲಿನ ಫಸ್ಟ್‌ಗ್ರೇಡ್ ಮತ್ತು ಜೂನಿಯರ್ ಕಾಲೇಜುಗಳಲ್ಲಿನ ಸಲಹಾ ಸಮಿತಿಗೆ ಅಧ್ಯಕ್ಷರಾಗಿ ಇರಬೇಕೆಂದು ಇತ್ತು. ಈಗ ಅದನ್ನು ಬದಲಾಣೆ ಮಾಡಿರಬಹುದು ಆದರೆ ಜಿಲ್ಲಾಪರಿಷತ್ತು ಮತ್ತು ಇತರರನ್ನು ಸೇರಿಸಿದ್ದಾರೆ. ಆದರೂ ಕೂಡ ಶಾಸಕರನ್ನು ಮುಂದುವರಿಸುವುದಕ್ಕೆ ಕೂಡಲೇ ಸರಕಾರದ ಆದೇಶದ ಬಗ್ಗೆ ಪ್ರಯತ್ನ ಮಾಡುತ್ತೇವೆ. ಎಂದು ಹೇಳಬಯಸುತ್ತೇನೆ.

(೭) ಪುತ್ತೂರು ತಾಲ್ಲೂಕಿನಲ್ಲಿ ರಬ್ಬರ್ ಸಂಸ್ಕರಣ ಮಾಡುವವರಿಗೆ ಅರಣ್ಯ ಪ್ಲಾಂಟೇಷನ್ ಅಧಿಕಾರಿಗಳಿಂದ ಕಿರುಕುಳ ಆಗುತ್ತಿರುವ ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ದಕ್ಷಿಣ ಕನ್ನಡ ಜಿಲ್ಲೆಯ, ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಕರ್ನಾಟಕ ರಬ್ಬರ್ ಪ್ಲಾಂಟೆ ಶನ್ ಎಂಬ ಸಂಸ್ಥೆ ಕರ್ನಾಟಕ ಸರಕಾರದ ವತಿಯಿಂದ ಸುಮಾರು ೧೮ ವರ್ಷಕ್ಕೆ ಮೇಲ್ಪಟ್ಟು, ೧೩,೩೭೮ ಎಕ್ರೆ ರಬ್ಬರ್ ತೋಟ ಹೊಂದಿರುವುದು. ಈ ಸಂಸ್ಥೆಗೆ ಅತೀ ಕಮ್ಮಿ ಎಂದೆರೆ ತಿಂಗಳೊಂದರ ಒಂದು ಕೋಟಿ ರೂಪಾಯಿ ಆದಾಯ ಬರಬೇಕು. ಹೀಗಿರುವಲ್ಲಿ ಈ ಸಂಸ್ಥೆಯ ಗುಣ ಎಂದರೆ ಸಧ್ಯದಲ್ಲಿಯೇ ಮುಂದುವರಿದು ತೊರಿಕೆಗೆ ಪುಸ್ತಕದಲ್ಲಿ ಒಂದು ನವೂನೆ ಆಜೆಸ್ಟ್‌ಮೆಂಟು ಲೆಕ್ಕಾಚಾರದಲ್ಲಿ ಇದೆ ಎಂದು ಸಾಧಾರಣ ಎಲ್ಲರಿಗೂ ತೀಳಿದ ವಿಷಯ. ರಬ್ಬರು ಬೆಳೆಯಾಗಲೀ, ರಬ್ಬರು ಪ್ಯಾಕ್ಟರಿಗಳಾಗಲಿ, ಯಾವುದೇ ರಬ್ಬರು ವ್ಯವಹಾರವಾಗಲಿ ಸಂಪೂರ್ಣ ಕೇಂದ್ರ ಸರಕಾರದ ವತಿಯಿಂದ ನಡೆಯಲ್ಪಡುತ್ತಿರುವ, ಈ ರಬ್ಬರು ಬೋರ್ಡು, ರಬ್ಬರು, ಕೃಷಿಕರಿಗೆ. ಸಬ್ಸಿಡಿ ಸಹಾಯ ಧನವನ್ನು ನೀಡಿ, ಖಾಸಗಿ ರಬ್ಬರು ಬೆಳೆಸುವುವವರು ಸಾಧ್ಯವಿರುವ ಎಲ್ಲಾ ಕಡೆ ರಬ್ಬರು ಬೆಳೆಸಿರುತ್ತಾರೆ. ಇದರಲ್ಲಿ ರಬ್ಬರ್ ಸಂಸ್ಕರಣಾ ಕಾರ್ಖಾನೆಗಳನ್ನು ನಡೆಸಲು ಉಮೇದ್ವಾರರು ರಬ್ಬರು ಬೋರ್ಡಿಗೆ ಅರ್ಜಿ ಸಲ್ಲಿಸಿ, ಕೂಲಂಕುಷ ಪರಿಶೀಲನೆ ನಡೆಸಿ, ಅಧಿಕಾರಿಗಳು (ರಬ್ಬರ್ ಬೋರ್ಡ್) ಸಾಧ್ಯವಿದ್ದವರಿಗೆ, ಪರವಾನಿಗೆ ನೀಡಿರುತ್ತಾರೆ. ಈ ಪರವಾನಿಗೆ ಸಿಕ್ಕಿದ ನಂತರ ಅರ್ಜಿದಾರರು ಕಾರ್ಖಾನೆಗಳನ್ನು ನಡೆಸಲು, ವಾಣಿಜ್ಯ, ಹಣಕಾಸು ಸಂಸ್ಥೆಗಳಿಗೆ ಹಣ ಹಾಗೂ ಸಹಾಯ ಧನಕ್ಕೆ ಅರ್ಜಿ ಸಲ್ಲಿಸಿದವರಿಗೆ, ಈ ಸಂದರ್ಭದಲ್ಲಿ ಮೇಲೆ ಹೇಳಿದ ಕರ್ನಾಟಕ ರಬ್ಬರ್ ಪ್ಲಾಂಟೇಶನ್ ಕಾರ್ಪೊರೇಶನ್ನಿಗೆ ಉನ್ನತ ಅಧಿಕಾರಿಗಳು ತಮ್ಮ ಪ್ರಭಾವವನ್ನು ಹಣಕಾಸು ನಿಗಮ ಗಳಿಗೆ ಬೀರಿ ಖಾಸಗಿ ರಬ್ಬರ್ ಕಾರ್ಖಾನೆಗಳನ್ನು ಮಾಡುವವರಿಗೆ ಉತ್ತೇಜನ ಕೊಡಬೇಡಿ, ಸಾಲ ನೀಡಬೇಡಿ, ಇದರಿಂದ ಸಂಸ್ಥೆಗೆ ತೊಂದರೆಯಾಗುತ್ತದೆ ಎಂದು ಕೈಗಾರಿಕಾ ಇಲಾಖೆ ಅಧಿಕಾರಿಗಳಿಗೂ, ಇಂತಹ ಕಾರ್ಖಾನೆಗಳಿಗೆ ಪರವಾನಿಗೆ ನೀಡಬಾರದು ಎಂದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಮೇದ್ವಾರಿಯ ರಬ್ಬರ್ ಸಂಸ್ಕರಣಾಲಯ, ಪರವಾನಿಗೆ (ಲೈಸನ್ಸ್) ಸಧ್ಯ ಹೊಂದಿರುವವರನ್ನು ಕಷ್ಟಕ್ಕೆ ಹಾಗೂ ನಷ್ಟಕ್ಕೆ ಒಳಪಡಿಸಿರುವುದು ತಿಳಿದು ಬರುತ್ತದೆ. ಹೀಗಾದರೆ, ಈ ರಬ್ಬರ್ ಬೆಳೆಯುವವರ ರಬ್ಬರನ್ನು ಯಾರು ಸಂಸ್ಕರಿಸ ಬೇಕು ? ಆಥವಾ ಈ ರಬ್ಬರ್ ವ್ಯವಹಾರವನ್ನು ಕರ್ನಾಟಕದಲ್ಲಾಗಲೀ, ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಲಿ ಯಾರು ಮಾಡಬೇಕು. ಕರ್ನಾಟಕ ರಬ್ಬರ್ ಪ್ಲಾಂಟೇಶನ್ ಕಾರ್ಪೊರೇಷನ್‌ನವರೇ ತಮ್ಮಲ್ಲಿ ಸಂಸ್ಕರಿಸಿದ ಹಾಗೂ ಸಂಸ್ಕರಿಸದೇ ಇದ್ದ ರಬ್ಬರನ್ನು ಪ್ರತೀ ತಿಂಗಳಿಗೊಮ್ಮೆ ಏಲಂ ಮಾಡುತ್ತಿರುವರು. ಇಲ್ಲಿ ಸ್ವಾರಸ್ಯಕವಾದ ವಿಷಯವೇನೆಂದರೆ, ಕರ್ನಾಟಕ ಪ್ಲಾಂಟೇಶನ್ ಕಾರ್ಪೊರೇಷನ್‌ನವರೇ ಹೇಳುವ ಮಾತು, ಖಾಸಗಿಯವರು ರಬ್ಬರು ಪ್ಯಾಕ್ಟರಿ ನಡೆಸಿದರೆ ನಮ್ಮ ಪ್ಲಾಂಟೇಶನ್ನಿನ ರಬ್ಬರು ಕುದ್ದು ಮಾರಾಟವಾಗಿ, ಖಾಸಗಿಯವರಿಗೆ ಹೋಗುವುದು ಎಂದು. ಈ ವಿಚಾರದಲ್ಲಿ ಹೇಳುವುದಾದರೆ ಈ ಕಾರ್ಪೊರೇಷನ್ನಲ್ಲಿ ಸಾವಿರಾರು ಸಿಬ್ಬಂಧಿಗಳು ಇದ್ದಾರೆ, ಒಂದು ಪೋಲೀಸು ಘಟಕ ಇದೆ. ಹಲವಾರು ಜೀಲಪುಗಳು, ಕೋವಿಗಳು ಇರುವುವು. ಪ್ಲಾಂಟೇಶನ್ ಸೂಪರಿಂಟೆಂಡೆಂಟ್‌ರುಗಳು, ಗಾರ್ಡಗಳು, ಮೇಸ್ತ್ರಿಗಳು, ಇತರ ಹಲವಾರು ಸಿಬ್ಬಂಧಿಗಳು ಇರುವಾಗ ಈ ಮೇಲಿನ ಕಾರಣ ಕೊಡುವುದು, ಸಂಪೂರ್ಣ ಆಧಾರರಹಿತ ಮತ್ತು ಬೇಜವಾಬ್ದಾರಿ ತನದ ವಿಷಯವಾಗಿದೆ. ಹಾಗದರೆ ಇದರ ಕಾರಣ ಎನು ಇರಬಹುದು ? ಈಗ ಕೇರಳದಲ್ಲಿ ರಬ್ಬರ್ ಪ್ಲಾಂಟೇಷನ್ ಕಾರ್ಪೊರೇಷನ್ ಇದೆ ಅವರದೇ ರಬ್ಬರ್ ತೋಟ ಸಂಸ್ಕರಣ ಘಟಗಳಿವೆ. ಕೇರಳದಲ್ಲಿ ಖಾಸಗಿ ರಬ್ಬರ್ ಪರಿಷ್ಕರಣ ಘಟಕಗಳು ಇರುವಷ್ಟು, ಕಾರ್ಖಾನೆಗಳು, ಭಾರತ ದೇಶದಲ್ಲಿ ಇನ್ನೆಲ್ಲೂ ಇರುವುದಿಲ್ಲ.

ಇದರಿಂದ ಕರ್ನಾಟಕ ರಬ್ಬರ್ ಪ್ಲಾಂಟೇಶನ್ನಿನ ಉತ್ಪಾದನೆಯೂ ಕಳ್ಳ ಸಾಗಾಣಿಕೆಯಲ್ಲಿ ಕೇರಳದ ಜನತೆಯ ಅಧಿಪತ್ಯನಲ್ಲಿ ಮುಂದುವರಿಯುವ ಸನ್ನಾ ಒಳಗಿಂದೊಳಗೆ ನಡೆಯುತ್ತಿರುವುದು, ಸರಕಾರದ ಗಮನಕ್ಕೆ ಬಂದಿದೆಯೇ ? ಕಳೆದ ಎರಡು ವರ್ಷಗಳಿಂದ ಈ ಕರ್ನಾಟಕ ರಬ್ಬರ್ ಪ್ಲಾಂಟೆ ಶನ್ ಸಂಸ್ಥೆಯವರು ಸಮಿತಿ ಸಭೆಗಳನ್ನು ಕರೆಯುತ್ತಿಲ್ಲ. ಇಲಾಖೆಯ ಅಧಿಕಾರಿಗಳು ಇಷ್ಟ ಬಂದಂತೆ ರಬ್ಬರ್ ಕಾಲೋನಿಯ ಮನೆ ರಿಪೇರಿ ಎಂದು ಲಕ್ಷಗಟ್ಟಲೆ ಹಣ ನುಂಗುತ್ತಿರುವರು ಹೊರಗಡೆಯವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿರುವರು. ಅದುದರಿಂದ ಖಾಸಗಿಯವರಿಗೆ ರಬ್ಬರ್ ಪರಿಷ್ಕರಣ ಘಟಕಕ್ಕೆ ಪರವಾನಿಗೆ ಹಾಗೂ ಹಣಕಾಸು ಸಂಸ್ಥೆಗೆ ಅಡ್ಡಿ ಆತಂಕಪಡಿಸುತ್ತಿರುವುದನ್ನು ಮತ್ತು ಈ ರಬ್ಬರ್ ಪ್ಲಾಂಟೇಶನ್‌ನವರು ಅಧಿಕಾರಿಗಳು, ಇಷ್ಟ ಬಂದಂತೆ ಬಡ ಕಾರ್ಮಿಕರಿಗೆ ಕೊಡುವ ಕಿರುಕುಳಗಳನ್ನು ನಿಲ್ಲಿಸುವಂತೆ ಕ್ರಮ ಕೈಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟಿ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವಶದಲ್ಲಿರುವ ರಬ್ಬರು ತೋಟಗಳ ಆದಾಯವು ಪ್ರತಿವರ್ಷ ಹೆಚ್ಚುತ್ತಲೇ ಇದೆ. ೮೬–೮೭ನೇ ಸಾಲಿನಲ್ಲಿ ೪.೫ ಕೋಟಿ ರೂಪಾಯಿ ಆದಾಯವು ಸುಮಾರು ೩,೪೦೦ ರಬ್ಬರ್ ಪ್ಲಾಂಟೇಷನ್‌ಗಳಿಂದ ಬಂದಿದೆ. ಎಲ್ಲ ಲೆಕ್ಕಪತ್ರಗಳು ಆಂತರಿಕ ಲೆಕ್ಕ ತಪಾಸಿಕರು, ಅಧಿಕೃತ ಲೆಕ್ಕ ತಪಾಸಿಕರು ಹಾಗೂ ಆಕೌಂಟೆಂಟ್ ಜನರಲ್ ಇವರುಗಳಿಂದ ಪ್ರತಿವರ್ಷ ತಪಾಸಣೆ ಆಗುತ್ತಿದೆ. ತಿಂಗಳಿಗೆ ಒಂದು ಕೋಟಿ ರೂಪಾಯಿ ಆದಾಯ ಬರಬೇಕೆಂಬುದು ಊಹೆ ಆಗಿದೆಯೇ ಹೊರತು ಇದು ಅಸಾಧ್ಯ.

ರಬ್ಬರ್ ತೋಟಗಳಿಂದ ಲೆಟೆಕ್ಸ್ ಪ್ರಮಾಣ ಹೆಚ್ಚುತ್ತಿರುವುದರಿಂದ ಸೆಂಟ್ರಿಫ್ಯೂಸ್ ಪರಿಷ್ಕರಣ ಶಕ್ತಿಯನ್ನು ಹೆಚ್ಚಿಗೆ ಮಾಡಿ ಎರಡು ಹೊಸ ಯಂತ್ರೋಪ್ರಕರಣಗಳನ್ನು ಹಾಕಿರುವುದರಿಂದ ಸಂಸ್ಕರಣ ಶಕ್ತಿ ಹೆಚ್ಚಾಗಿದೆ. ಇದರಿಂದ ಖಾಸಗಿ ರಬ್ಬರ್ ಬೆಳೆಗಾರರಿಂದ ಅವರ ಲೆಟೆಕ್ಸ್‌ಯೋಗ್ಯ ಬೆಲೆ ಕೊಟ್ಟು ಖರೀದಿಸಿ ನಮ್ಮ ಕಾರ್ಖಾನೆಯಲ್ಲಿ ಇರುವ ಸಂಸ್ಕರಣ ಶಕ್ತಿಯ ಪೂರ್ಣ ಉಪಯೋಗ ಮಾಡಿಕೊಳ್ಳುವ ಆಲೋಚನೆ ಇತ್ತು.

ನಿಗಮದ ರಬ್ಬರ್ ತೋಟಗಳ ಮಧ್ಯದಲ್ಲಿಯೇ ಖಾಸಗಿ ಕಾರ್ಖಾನೆಗೆ ಅನುಮತಿ ಕೊಟ್ಟಲ್ಲಿ ನಿಗಮದ ತೋಟಗಳಿಂದ ರಬ್ಬರ್ ಲೆಟೆಕ್ಸ್ ಕಳುವಾಗುವ ಸಂದರ್ಭ ಇರುವುದರಿಂದಲೂ ಹಾಗೂ ಸಂಸ್ಕರಣ ಕೇಂದ್ರಗಳ ಉತ್ಪಾದನಾ ಶಕ್ತಿಯನ್ನು ಪೂರ್ಣ ಉಪಯೋಗಿಸುವ ಉದ್ದೇಶದಿಂದಲೂ ನಿಗಮವು ಕೆ. ಎನ್. ಎಫ್. ಸಿ ಹಾಗೂ ರಬ್ಬರ್ ಬೋರ್ಡ್ ಹಾಗೂ ವಾಣಿಜ್ಯ ಇಲಾಖೆಗೆ ನಿಗಮವು ಆ ಬಗ್ಗೆ ವಿನಂತಿಸಿಕೊಂಡಿತ್ತು. ಆದ್ದರಿಂದ ನಿಗಮವು ಖಾಸಗಿಯವರಿಗೆ ಕಾರ್ಖಾನೆ ನಿರ್ಮಿಸುವುದಕ್ಕೆ ಅಪ್ಪಣೆ ಕೊಡಲೇಬಾರದೆಂದು ಹೇಳಿಲ್ಲ. ರಬ್ಬರ್ ಬೋರ್ಡ್‌ನವರು ತಮ್ಮ ಕಾನೂನು ರೀತ್ಯ ಲೈಸೆನ್ಸ್ ಕೊಟ್ಟಿರುತ್ತಾರೆ. ಹಾಗೂ ಕೆ. ಎಸ್. ಎಫ್. ಸಿ. ಯವರು ಕೂಡ ಸಾಲ ಮಂಜೂರು ಮಾಡಿದ ಬಗ್ಗೆ ತಿಳಿಸಿದ್ದಾರೆ.

ತಾಂತ್ರಿಕ ನಿಯಮಗಳನುಸಾರವಾಗಿ ಕಚ್ಚಾವಸ್ತು ಉತ್ಪಾದನೆಗಳಿಗಿಂತ ಹೆಚ್ಚು ಸಂಸ್ಕರಣ ಸಾಮರ್ಥ್ಯ ಹೊಂದಿದ ಯಂತ್ರೋಪಕರಣಗಳುಳ್ಳ ಕಾರ್ಖಾನೆಗಳಿಗೆ ಮಂಜೂರಾತಿ ನೀಡಿದಲ್ಲಿ ಇಂತಹ ಕಾರ್ಖಾನೆಗಳು ಅಶಕ್ತವಾಗುತ್ತವೆ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟಗಳ ವಿಸ್ತೀರ್ಣ ಕಳೆಳಿಸಿ ಹೆಕ್ಟೇರುಗಳು ಇದ್ದು ಸೂಳ್ಯ ಹಾಗೂ ಪುತ್ತೂರು ತಾಲ್ಲೂಕುಗಳಲ್ಲಿ ವಿಸ್ತಾರವಾಗಿ ಹಬ್ಬಿವೆ. ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕ ಜನರು ಸುಮಾರು ೨,೫೦೦ ಇದ್ದಾರೆ. ಇವರು ರಕ್ಷಣೆಗೆ ಹೊಣೆಗಾರರಲ್ಲ. ರಕ್ಷಣಾ ಸಿಬ್ಬಂದಿ ಸಾಮಿರಾರು ಜನ ಇರುವುದಿಲ್ಲ. ಹೆಚ್ಚು ಜನ ರಕ್ಷಣಾ ಸಿಬ್ಬಂದಿಯನ್ನು ಅರಣ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ ತೆಗೆದುಕೊಳ್ಳಲಾಗಿದೆ. ಹೀಗಿದ್ದರೂ ಸ್ಕ್ರಾಪ್ ರಬ್ಬರ್ ಕಾರ್ಮಿಕರ ಸಾಮೀಲಿನಿಂದ ಕಳ್ಳ ಸಾಗಣಿಕೆ ಆಗುತ್ತಿದೆ. ನಿಗಮವು ಸಂಚಾರಿ ಪೋಲೀಸ್ ಪಾರ್ಟಿಯ ರಕ್ಷಣೆಗೋಸ್ಕರ ಪೋಲೀಸ್ ಇಲಾಖೆಯಿಂದ ಎರವಲು ಸೇವೆಯ ಮೇಲೆ ತೆಗೆದುಕೊಂಡಿದೆ. ಈ ಕ್ರಮಗಳಿಂದ ಕಳ್ಳ ಸಾಗಣೆ ಪ್ರಮಾಣವು ಕಳೆದ ಎರಡು ವರ್ಷಗಳಿಂದ ಗಣನೀಯವಾಗಿ ಕಡಿಮೆಯಾಗಿದೆ. ರಬ್ಬರ್ ವಿಭಾಗದಲ್ಲಿ ಆರು ಕಾರ್ಮಿಕ ಸಂಘಗಳು ಇವೆ. ಅವುಗಳ ನ್ಯಾಯಸಮ್ಮತ ವಿಷಯಗಳ ಬೇಡಿಕೆಗಳ ಬಗ್ಗೆ ನಿಗಮವು ಗಮನ ಕೊಡುವುದಿಲ್ಲ. ಕಾರ್ಮಿಕರ ದಿನನಿತ್ಯದ ಕಾಂದುಕೊರತೆ ಹಾಗೂ ತಕರಾರುಗಳ ಬಗ್ಗೆ ವಿಚಾರಣೆ ಮಾಡಲು ವರ್ಕ್ಸ್ ಕಮಿಟಿ ಹಾಗೂ ಗ್ರೀವನ್ಸ್ ಕಮಿಟಿಗಳನ್ನು ೮೭ನೇ ಸಾಲಿನಿಂದ ನಿರ್ಮಿಸಲಾಗಿದೆ. ಈ ಕಮಿಟಿಗಳಲ್ಲಿ ಕಾರ್ಮಿಕ ಪ್ರತಿನಿಧಿಗಳ ಹಾಗೂ ಆಡಳಿತ ವರ್ಗದ ಪ್ರತಿನಿಧಿಗಳು ಇರುತ್ತಾರೆ. ಕಮಿಟಿಗಳು ಕಾಲಕಾಲಕ್ಕೆ ಸಭೆ ಸೇರಿ ಚರ್ಚೆ ನಡೆಸಿ ನ್ಯೂನತೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ರಬ್ಬರ್

ತೋಟಗಳ ಕಾರ್ಮಿಕರ ಕಾಲೋನಿಯಲ್ಲಿಯು ಮನೆಗಳ ರಿಪೇರಿಯನ್ನು ಪ್ರತಿವರ್ಷದಲ್ಲೂ ಅವಶ್ಯಕತೆ ಇದ್ದಲ್ಲಿ ಮಾಡಲಾಗುತ್ತದೆ. ಲಕ್ಷಗಟ್ಟಲೆ ಹಣ ಸಂಗುತ್ತಾರೆ ಎಂಬ ಅಪಾದನೆ ನಿಜವಲ್ಲ, ಯಾವು ದಾದರೂ ನಿರ್ದಿಷ್ಟ ಪ್ರಕರಣವನ್ನು ಸೂಚಿಸಿದರೆ ಅದನ್ನು ತನಿಖೆ ಮಾಡಿಸಬಹುದು. ಕೆಲಸ ಖಾಲಿ ಯಿದ್ದಾಗ ಕಾನೂನು ಮೇರೆಗೆ ಸ್ಥಳೀಯ ಜನರಿಗೆ ಹಾಗೂ ಹಂಗಾಮಿ ಕೆಲಸದ ಮೇಲೆ ಹೋದರೆ ಕೆಲಸ ಮಾಡಿದ ಕಾರ್ಮಿಕರಿಗೆ ಕೊಡಲಾಗುವುದು.

೮) ಮಂಗಳೂರಿನ ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಗ್ರಾಮಗಳಿಗೆ ಪಡಿತರ ಪದ್ಧತಿಯಲ್ಲಿ ತಾರತಮ್ಯವಾಗಿರುವುದು

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಮತ್ತು ಉಳ್ಳಾಲ ಟೌನ್ ಪಂಚಾಯತ್ ಸರಹದ್ದಿನಲ್ಲಿ ಪ್ರತಿ ರೇಷನ್ ಕಾರ್ಡುಗಳಿಗೆ ೨೦ ಕಿಲೋ ಅಕ್ಕಿ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆಯಾಗುತ್ತದೆ ಆದರೆ ಇದಕ್ಕೆ ತಾಗಿಕೊಂಡಿರುವ ಹತ್ತಿರವೇ ಇರುವ ಪೆರ್ಮನ್ನೂರು, ಸೋಮೇಶ್ವರ ಉಚ್ಚಿಲ. ಕೊಳಚೆಕಾರ್, ತಲವಾಡಿ, ಕಿನ್ಯ, ಬೆಳ್ಳ, ಅಂಬ್ಲಮೊಗ್ರು ಮುನ್ನೂರು, ಬಜಾಲ್ ಮೊದಲಾದ ಗ್ರಾಮಗಳಲ್ಲಿ ಪ್ರತಿ ಕಾರ್ಡಿಗೆ ಹತ್ತು ಕೆ.ಜಿ. ಅಕ್ಕಿ ಕೊಡಲಾಗು ತ್ತಿದೆ. ನಗರಕ್ಕೆ ತಾಗಿಕೊಂಡು ಹತ್ತಿರದಲ್ಲೇ ಇರುವ ಈ ಗ್ರಾಮಗಳಿಗೆ ಈ ರೀತಿ ಕಡಿಮೆ ಕೊಡುವ ತಾರತಮ್ಯದಿಂದ ಜನರು ತುಂಬಾ ಬೇಸರಗೊಂಡಿರುತ್ತಾರೆ. ಆದಕಾರಣ ನಗರ ಪ್ರದೇಶಕ್ಕೆ ಪಡಿತರ ಅಕ್ಕಿ ಕೊಟ್ಟಂತೆ ಒತ್ತಿನ ಈ ಗ್ರಾಮಗಳಿಗೂ ಅಕ್ಕಿ ವಿತರಣೆಯಾಗುವಂತೆ ಮಾಡುವುದು ಅತೀ ಅಗತ್ಯವಾಗಿರುತ್ತದೆ. ಈ ಕುರಿತು ಆಹಾರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಂಗಳೂರು ಮಹಾನಗರ ಪಾಲಿಕೆ ಮತ್ತು ಉಳ್ಳಾಲ ಟೌನ್‌ಗಳನ್ನು ಒಟ್ಟಿಗೆ ಅನೌಪಚಾರಿಕ ಪಡಿತರ ಪ್ರದೇಶವೆಂದು ೧೯೭೬ರಿಂದಲೇ ಘೋಷಿಸಲಾಗಿದೆ. ಈ ಪ್ರದೇಶದಲ್ಲಿ ಜಾರಿಯಲ್ಲಿರುವ ನಿಯಮದಂತೆ ಪ್ರತಿ ಕಾರ್ಡುದಾರರಿಗೂ ೨೦ ಕೆ.ಜಿ. ಅಕ್ಕಿಯನ್ನು ಈ ಕೆಳಕಂಡ ದರದಲ್ಲಿ ವಿತರಣೆ ಮಾಡಲಾಗುತ್ತಿದೆ.

ಅತ್ಯುತ್ತಮ ಅಕ್ಕಿ ಕೆ.ಜಿ.ಗೆ	—	ರೂ. ೨–೭೫
ಉತ್ತಮ ,,	—	ರೂ. ೨–೭೫
ಸಾಮಾನ್ಯ ,,	—	ರೂ. ೨–೦೦

ಈ ರೀತಿ ವಿತರಣೆ ಮಾಡುವ ಅಕ್ಕಿಯನ್ನು ಕರ್ನಾಟಕ ಸರಕಾರವು ತನ್ನ ದಾಸ್ತಾನಿನಿಂದ ಅಥವಾ ಭಾರತ ಸರ್ಕಾರವು ಸಾರ್ವಜನಿಕ ವಿತರಣೆಗಾಗಿ ಬಿಡುಗಡೆ ಮಾಡುವ ಅಕ್ಕಿಯಿಂದ ವಿತರಣೆ ಮಾಡುತ್ತಿದೆ. ಸದರಿ ಅಕ್ಕಿಗೆ ಕರ್ನಾಟಕ ಸರಕಾರವು ಈ ಕೆಳಕಂಡಂತೆ ಸಹಾಯ ಧನ ಭರಿಸುತ್ತಿದೆ.

		ಅನೌಪಚಾರಿಕ ಪಡಿತರ ಪ್ರದೇಶ	ಕೇಸರಿ ಪಡಿತರ ಚೀಟಿ
		ನಗರ ಪ್ರದೇಶ	ವಿತರಣೆಗೆ
ಸಹಾಯ ಧನ	ಅತ್ಯುತ್ತಮ	೧೪–೩೨ ಕ್ವಿ.ಗೆ	೧೫–೮೨ ಕ್ವಿ.ಗೆ
	ಉತ್ತಮ	—	—
	ಸಾಮಾನ್ಯ	೬೧–೭೮	೫೯–೨೮

ಮಹಾನಗರ ಪಾಲಿಕೆ ಮತ್ತು ಪಟ್ಟಣ ಪ್ರದೇಶವನ್ನು ಹೊರತು ಪಡಿಸಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶವನ್ನು ಭಾರತ ಸರ್ಕಾರದ ಯೋಜನೆಯಾದ ''ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ'' ಅಡಿಯಲ್ಲಿ ತರಲಾಗಿದೆ. ಈ ಯೋಜನೆಯು ಅನುಷ್ಠಾನಕ್ಕಾಗಿ ಭಾರತ ಸರ್ಕಾರವೇ ಅಕ್ಕಿಯನ್ನು ಬಿಡುಗಡೆ ಮಾಡುತ್ತಿದ್ದು ರಾಜ್ಯ ಸರ್ಕಾರವು ಯಾವ ರೂಪದಲ್ಲೂ ಸಹಾಯ ಧನವನ್ನು ಭರಿಸುತ್ತಿಲ್ಲ. ಭಾರತ ಸರ್ಕಾರವು ಈ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು ರಾಜ್ಯಕ್ಕೆ ೫೬೦೦ ಮೆಟ್ರಿಕ್ ಟನ್ ಅಕ್ಕಿಯನ್ನು ನೀಡುತ್ತಿದ್ದು ಇದರಲ್ಲಿ ೨-೩೦೦ ಮೆ. ಟನ್ ಅಕ್ಕಿ ಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಲಾಗುತ್ತಿದೆ. ಇನ್ನುಳಿದ ದಾಸ್ತಾನನ್ನು ಇತರ ಸಮಗ್ರ ಗಿರಿಜನ ಅಭಿವೃದ್ಧಿ ಯೋ ಜನೆ ಜಿಲ್ಲೆಗಳಾದ ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಲಭ್ಯವಿರುವ ದಾಸ್ತಾನಿನ ಮೇಲೆ ಪ್ರತಿ ಹಿರಿಯ ಕಾರ್ಡುದಾರರಿಗೆ ಕಾರ್ಡಿಗೆ ೧೦ ಕೆ.ಜಿ.ಯಂತೆ ಹಾಗೂ ಪ್ರತಿ ಕೇಸರಿ ಕಾರ್ಡು ದಾರರಿಗೆ ಕಾರ್ಡಿಗೆ ೫ ಕೆ.ಜಿ.ಯಂತೆ ಈ ಕೆಳಕಂಡ ದರದಲ್ಲಿ ವಿತರಿಸಲಾಗುತ್ತಿದೆ.